Reg No. B G 155 19-3-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ.
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ.ಸೆ.

ಸಕಲರಿಗೂ ಯುಗಾದಿ ಶುಭಾಶಯಗಳು

ಮೈಸೂರು ನಜರಬಾದು ರಾಣಾ ಪ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ – ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ
ವಿವಿಧ ವಿನೋದಾವಳಿಗಳು
ಮಲಬಾರಿನ ನುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ
ಪ್ರವೇಶ ಧನ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ನಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪರೇಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪಂಚಾಂಗ ಸ್ವೀಕಾರ

ದೈವಜ್ಞ ಶಿಖಾಮಣಿ ಇತ್ಯಾದಿ ಬಿರುದಾಂಕಿತರಾದ ಶ್ರೀ ಸಂಪತ್ಕೃಷ್ಣ ಜೋಯಿಸರವರ ಪುತ್ರರಾದ ಜ್ಯೋತಿಷ, ಧರ್ಮಶಾಸ್ತ್ರ ವಿದ್ವಾನ್ ಶ್ರೀ ಸ. ಕೃಷ್ಣ ಜೋಯಿಸರವರಿಂದ ಗುಣಿಸಲ್ಪಟ್ಟ ಪರಿಶೋಧಿಸಲ್ಪಟ್ಟಿರುವ ಸೌಮ್ಯ ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ವಂಪನಾ ಪೂರ್ವಕವಾಗಿ ಸ್ವೀಕರಿಸಿದ್ದೇವೆ. ಎಂದಿನಂತೆ ಜನಪ್ರಿಯವಾದ ಪಂಚಾಂಗದಲ್ಲಿ ಪ್ರತಿದಿನದ ವಿಷಯಗಳ ಜೊತೆಗೆ, ರಥೋತ್ಸವಗಳು, ರಾಶಿಗೋಚಾರ ಫಲ, ವಿವಾಹ ಮುಹೂರ್ತ ಇತ್ಯಾದಿ ವಿಷಯಗಳು ಮತ್ತು ಇತರ ಅನೇಕ ಉಪಯುಕ್ತ ಜ್ಯೋತಿಷ್ಯ ವಿಷಯಗಳೂ ಇದ್ದು ಮನೆಯಲ್ಲೇ ಪುಟ್ಟ ಜೋಯಿಸರೇ ಇದ್ದಂತಾಗುತ್ತದೆ.

★

ಬಸ್ಸಿಗೆ ಬೆಂಕಿ

ಹೈದರಾಬಾದಿನ ರಾಸನ ಸಭಾ ಭವನದ ಹತ್ತಿರ ಒಂದು ಡಬ್ಬಲ್ ಡೆಕ್ ಬಸ್‌ನ ಕೂಡುವ ಸ್ಥಳಗಳಿಗೆ ಬೆಂಕಿ ಇ ಟ್ಟ ಇತರ 15 ವಾಹನಗಳಿಗೆ ನಷ್ಟಗೊಳಿಸಿದರು ಈ ಮುನ್ನ ಪ್ರದರ್ಶನಕಾರರನ್ನು ಚದುರಿಸಲು ಪೋಲೀಸರು ಲಾಠಿಪ್ರಹಾರ ಮಾಡಿದರು.

ಕೀಲಕ ಸಂವತ್ಸರ ನಿನ್ನೆಗೆ ಮುಗಿಯಿತ್ತು. ಸೌಮ್ಯ ಸಂವತ್ಸರ ಇಂದಿನಿಂದ ಆರಂಭವಾಯಿತು.

ಬೇವು ಬೆಲ್ಲ ಸೇವಿಸುವ ಈ ಹಬ್ಬದಲ್ಲಿ ಜೀವನದ ಸುಖದುಃಖಗಳು ಹಾಸುಹೊಕ್ಕಿನಂತಿರುವುದು ವ್ಯಕ್ತವಾದರೂ, ಜನರಿಗೆ ದುಃಖವಾಗಲಿ ಕಷ್ಟವಾಗಲಿ ಇರದೆ ಸುಖ ಸಂತೋಷ ಇತೋಸ್ಯತಿಶಯವಾದ ಆರೋಗ್ಯ ಐಶ್ವರ್ಯಾದಿಗಳು ದೊರೆಯಲಿ.

ವಿಶ್ವಶಾಂತಿ ಸ್ಥಾಪನೆ ಆಗಿ ಭಗವಂತನು ಸರ್ವರಿಗೂ ಸಕಲ ಸನ್ಮಂಗಲವನ್ನುಂಟು ಮಾಡಲಿ.

★

ಮತ್ತೆ ಗುಂಡೇಟು

ಉಸುರಿ ನದಿ ಗಡಿಯಲ್ಲಿ ಚೀನರು ಮತ್ತೆ ರಷ್ಯ ಸೈನಿಕರ ಮೇಲೆ ಗುಂಡುಹಾರಿಸಿದರು.

★

ಮಹಾರಾಷ್ಟ್ರ ಸಿದ್ಧ

ಕೇಂದ್ರದ ಇಚ್ಛೆಯಂತೆ ಕೃಷ್ಣಾ – ಗೋದಾವರಿ ನೀರಿನ ವ್ಯಾಜ್ಯದಲ್ಲಿ ಖಾಸಗಿ ಪಂಚಾಯಿತಿಗೆ ಮಹಾರಾಷ್ಟ್ರ ಸಿದ್ಧವಿದೆ ಎಂದು ಶಾಸನ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ನಾಯಕ್ ತಿಳಿಸಿದರು.

★

ಪ್ರಧಾನಗೆ ಆಹ್ವಾನ

ಉತ್ತರ ಪ್ರದೇಶ ವಿಧಾನ ಸಭೆಯಲ್ಲಿ ಸದಸ್ಯರು ಉರ್ದುವಿನಲ್ಲಿ ಪ್ರಮಾಣ ವಚನ ಸ್ವೀಕರಿಸಲು ತಿರಸ್ಕರಿಸಲ್ಪಟ್ಟ ಕುರಿತು ತಮ್ಮ ಮನಸ್ಸು ನೊಂದಿರುವುದಾಗಿಯೂ ಈ ರೀತಿ ಆದದ್ದಕ್ಕೆ ಸರಿಪಡಿಸಲು ರಾಜ್ಯ ಸರ್ಕಾರಕ್ಕೆ ತಿಳಿಸಲಾಗುವುದೆಂದು ರಾಜ್ಯ ಸಭೆಯಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಿಳಿಸಿದರು.

ನವದೆಹಲಿ— 1966 ರಲ್ಲಿ ಹಶುನಿನಿಂದ 219 ಮಂದಿ ಸತ್ತಿರುವರೆಂದು ಪ್ರಕಟವಾಗಿದೆ.

ಉಪವಾಸ ಕೆದರಿಕೆ

ಈ ವರ್ಷ ಮಾರ್ಚ್ 7 ರಂದು ಜಯಪುರದಲ್ಲಿ ಆದ ಪೋಲೀಸು ಗೋಳೀಬಾರು ವಿಷಯದಲ್ಲಿ ಬೇರೆ ಆಯೋಗದ ವರದಿ ಸರಕಾರ ಸ್ವೀಕರಿಸಿ ಜಾರಿಗೆ ತರದೆ ಇದ್ದರೆ 5 ದಿನಗಳ ಕಾಲ ಸಭೆಯಲ್ಲಿ ಧರಣಿ ಕೈಗೊಳ್ಳುವುದಾಗಿ ರಾಜಸ್ಥಾನ ಶಾಸನ ಸಭೆಯಲ್ಲಿ ಜನಸಂಘದ ಶ್ರೀ ಸುರೇಶ ಅಗರವಾಲ ತಿಳಿಸಿದ್ದಾರೆ.

★

ಸಭಾತ್ಯಾಗ

ಈ ತಿಂಗಳು 15 ರಂದು ಪ್ರಾಥಮಿಕ ಶಾಲೆ ಉಪಾಧ್ಯಾಯರ ಮೇಲೆ ರಾಕ್ಷಸಿ ಪೋಲೀಸು ಅತ್ಯಾಚಾರ ಪ್ರತಿಭಟಿಸಿ ವಿರೋಧ ಪಕ್ಷಗಳಾದ ಶಾಸನ ಸಭೆ ಕಾಂಗ್ರೆಸ್ ಪಕ್ಷ ಮತ್ತು ಕೇರಳ ಕಾಂಗ್ರೆಸ್ ಪಕ್ಷಗಳು ಸಭಾಪರಿತ್ಯಾಗ ಮಾಡಿದವು.

★

ವ್ಯವಸಾಯದ ಖರ್ಚು

ಈ ವರ್ಷ ವಾಣಿಜ್ಯ ಬ್ಯಾಂಕುಗಳು ತಮ್ಮ ರೂ. 324 ಕೋಟಿ ಠೇವಣಿಯಲ್ಲಿ ವ್ಯವಸಾಯಕ್ಕಾಗಿ ಖರ್ಚು ಮಾಡುವ ಪರಿಸ್ಥಿತಿಯಲ್ಲಿವೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ಕೊಲಂಬೊ— ದಕ್ಷಿಣ ಸಿಲೋನಿನ ಕಡ್ಡರಗಾವು ದೇವಾಲಯದ ತೆಂಗಿನ ಕಾಯಿನ ಗಾತ್ರದ ಬಂಗಾರದ ಸಣ್ಣ ಗೋಪುರವು ಕಳುವಾಗಿದೆ – ದೇವಾಲಯದಲ್ಲಿ ತಮಿಳರೂ ಸಿಂಗಾಳಿಗಳೂ ಪೂಜಿಸುತ್ತಾರೆ.

●

ಕಲ್ಕತ್ತಾ— ರಷ್ಯಾ ರಾಯಭಾರಿ ಕಚೇರಿ ಮೇಲೆ ನುಗ್ಗಲು ಹೊರಟ 2000 ವಿದ್ಯಾರ್ಥಿಗಳನ್ನು ಪೋಲೀಸರು 25 ಗಜ ದೂರದಲ್ಲಿ ತಡೆದರು – ತಂಡದವರು ನಿರ್ಸ್ ಮತ್ತು ಕೋಸಿಗಿರವರ ಪ್ರತಿರೂಪನ್ನು ದಹಿಸಿದರು.

Edited, Printed Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4

ಗಾಂಧಿಯವರು ನುಡಿದ ಭವಿಷ್ಯ

1947 ಮೇ 21 ರಂದು ಪಾಟ್ನಾದಲ್ಲಿ ಗಾಂಧೀಜಿಯವರು ಮಾಡಿದ ಭಾಷಣದಲ್ಲಿ ಹೀಗೆ ಹೇಳಿದ್ದಾರೆ—

ಬ್ರಿಟಿಷರಂತೆ, ನನ್ನ ಅಧಿಕಾರವು ಶಸ್ತ್ರಾಸ್ತ್ರಗಳ ಮೇಲೆ ನಿಲ್ಲಲು ಸಾಧ್ಯವಿಲ್ಲ. ಕಾಂಗ್ರೆಸ್ಸು ತನ್ನ ಅನೇಕ ತ್ಯಾಗಗಳಿಂದ ಮತ್ತು ತಪಸ್ಸಿನಿಂದ ಜನರ ನಂಬಿಕೆ ಪಡೆದಿದೆ : ಆದರೆ ಈಗ ಜನರ ಸೇವಕರಾಗಿರುವ ಬದಲು, ಅಧಿಪತಿಯಾಗಿ, ಅವರ ಧಣಿಯ ಸ್ಥಾನದಲ್ಲಿ ಅಹಂಕರಿಸಿದರೆ, ನಾನು ಜೀವಿತನಾಗಿರಲ್ಲಿ ಇಲ್ಲದಿರಲಿ, ದೇಶದಲ್ಲಿ ಒಂದು ಕ್ರಾಂ ಬೀಸಿ, ಜನರು ಬಿಳೀ ಟೋಪಿಯವರನ್ನು ವ್ಯೆಯಕ್ತಿಕವಾಗಿ ಮೇಲಕ್ಕೆತ್ತಿಕೊಂಡು ಮುಗಿಸುವರು ಮತ್ತು ಒಂದು ಮೂರನೇ ಶಕ್ತಿ ಇದರ ಫಾಯಿದೆ ಪಡೆಯುತ್ತದೆ, ಎಂದು ನನ್ನ ಅನೇಕ ವರ್ಷಗಳ ಅನುಭವದ ಬಲದಿಂದ ಭವಿಷ್ಯ ನುಡಿಯಲು ಸಾಹಸನೂಡಿದ್ದೇನೆ, ಎಂದು ಹೇಳಿದರು. —ಪಿ. ಸಿ. ಸೆಗುಪ್ತ (ಟ್ರೂತ್)

ನಾಟಕ ಸ್ಪರ್ಧೆ

ನವೋದಯ ಯುವಕ ಸಂಘ (ಚಂದ್ರ ಆರ್ಟ್ಸ್) 8591 ಪ್ರಾಥಮಿಕ ಶಾಲಾ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು, ಇವರ ಆಶ್ರಯದಲ್ಲಿ, ಮೈಸೂರು ನಗರದಲ್ಲಿ, " ಅಖಿಲ ಕರ್ನಾಟಕ ಕಲಾವಿಲಾಸಿ ' ನಾಟಕ ಸ್ಪರ್ಧೆಯು ಏಪ್ರಿಲ್ ಮೊದಲ 15 ದಿನಸಗಳ ಕಾಲ ನಡೆಯುತ್ತದೆ. ವಿವರಗಳನ್ನು ಅವರಿಂದ ಪಡೆಯಬಹುದು.

ವುಡ್‌ಲ್ಯಾಂಡ್ಸ್ 21-3-69 ರಿಂದ

ಅಮೋಘ ಆರಂಭ

— ಚಿತ್ತಾಕರ್ಷ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ —

ಮೇರೆ ಹುಜೂರ್

ಪಾತ್ರ— ಮಾಲಾಸಿನ್ಹಾ, ರಾಜಕುಮಾರ್, ಜಿತೇಂದ್ರ, ಜಾನೀವಾಕರ್

ಸಂಗೀತ : ಶಂಕರ್ ಜೈಕರ್ಷ

[ದಿನ 3 ಪ್ರದರ್ಶನಗಳು]

ಅಪೆರಾ— 19-3-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಪರಾಶಕ್ತಿ

ಪಾತ್ರ : ಶಿವಾಜಿ ಗಣೇಶ್ ಪಂಡರಿಬಾಯಿ, ರಾಜೇಂದ್ರನ್

.... ದಿನವಹಿ 3 ಆಟಗಳು ....

ಕೀರ್ತಿಗೊಬ್ಬ ಮಗ
ಆರತಿಗೊಬ್ಬ ಮಗಳು

ಮಿತ ಸಂತಾನವೇ ಹಿತಜೀವನದ ಆಧಾರ
ಎರಡು ಅಥವಾ ಮೂರು ಮಕ್ಕಳು ಸಾಕು

ಪಡೆದರೆ ಮುತ್ತಿನಂಥಾ ಎರಡು
ಅಥವಾ ಮೂರೇ ಮಕ್ಕಳು ಪಡೆಯಬೇಕು